# ಡಾನ್ಸ್ ಮಾಡ್ತೀನಿ ಹಾಡ್ತೀನಿ, ಓದ್ತೀನಿ

## ದಿಶಾ

### ಕಲರ್ಸ್ ಕನ್ನಡದ 'ಕಿನ್ನರಿ'ಯ ಮಣಿ



★ *ದಿಶಾ ಎಲ್ಲಿದ್ದೀಯಾ? ಏನು ಮಾಡ್ತಿದ್ದೀಯಾ?*

ನಾನು ಮೈಸೂರಿನಲ್ಲಿದ್ದೀನಿ. ಕೌಟಿಲ್ಯ ವಿದ್ಯಾಲಯದಲ್ಲಿ ಒಂದನೇ ತರಗತಿಯಲ್ಲಿ ಓದುತ್ತಿದ್ದೇನೆ. ಅಮ್ಮ ಶ್ವೇತಾ ಅವರು ಫ್ಯಾಷನ್ ಡಿಸೈನಿಂಗ್ ಮಾಡುತ್ತಾರೆ. ಅಪ್ಪ ಶ್ರೀರಾಮ್ ಅವರು ಫೈನ್ ಆರ್ಟ್ಸ್. ನಾನು ತುಂಬಾ ಚೆನ್ನಾಗಿ ಓದುತ್ತೇನೆ. ಅದಕ್ಕೆ ನನಗೆ ಶಾಲೆಯಲ್ಲಿ ಎಲ್ಲರೂ ಪ್ರೋತ್ಸಾಹಿಸುತ್ತಾರೆ.

★ *ಈಗ ಏನಾಗಿದ್ದೀಯಾ? ಮುಂದೆ ಏನಾಗಬೇಕು ಅಂತಿದ್ದೀಯಾ?*

ಟೀಚರ್... ಅಲ್ಲ. ಡಾಕ್ಟರ್ ಆಗುತ್ತೇನೆ. ಈಗ 'ಕಿನ್ನರಿ'ಯಲ್ಲಿ ಆ್ಯಕ್ಟ್ ಮಾಡುತ್ತಿದ್ದೇನೆ. ಅಲ್ಲಿ ನನಗೆ ಯಾರೂ ದಿಶಾ ಅಂತ ಕರೆಯೋದಿಲ್ಲ. ಎಲ್ಲರೂ ಬರೀ 'ಮಣಿ... ಮಣಿ... ಮಣಿ' ಅಂತಾರೆ. ನನಗೆ ಅಲ್ಲಿ ತುಂಬಾ ಖುಷಿಯಾಗುತ್ತದೆ. ಜನರು ಕೂಡ ತುಂಬಾ ಪ್ರೀತಿಸುತ್ತಾರೆ. ಮೊನ್ನೆ ಬಾಗಲಕೋಟೆಗೆ ಸಿರಿಯಲ್ ಸಂತೆಗೆ ಹೋಗಿದ್ದೆ. ಎಷ್ಟು ಜನ ಅಂದ್ರೆ. ಹಾಲ್‌ನ ಹೊರಗೂ ಜನವೇ ಜನ. ಎಲ್ಲರೂ ನನ್ನನ್ನು ಮಾತನಾಡಿಸಲು ನುಗ್ಗಿ ಮುಂದೆ ಬರುತ್ತಿದ್ದರು.

★ *ತಪ್ಪು ಮಾಡಿದರೆ ಡೈರೆಕ್ಟರ್ ಬೈತಾರಾ? ಈಗ ಮಣಿ ಏನು ಮಾಡುತ್ತಿದ್ದಾಳೆ?*

ಈಗ ಆಕೆ ನಿದ್ದೆ ಮಾಡುತ್ತಿದ್ದಾಳೆ. ಹಹಹ... ಇಲ್ಲ. ಡೈರೆಕ್ಟರ್ ಅಂಕಲ್ ಒಂದು ಸಾರಿ ಹೇಳಿಕೊಟ್ಟರೆ ಸಾಕು ನಾನು ಹಾಗೆ ಮಾಡುತ್ತೇನೆ. ಮಾತು, ಶ್ಲೋಕ, ಹಾಡು ಎಲ್ಲಾ ಅಷ್ಟೇ ಒಂದು ಸಾರಿ ಹೇಳಿದರೆ ಹಾಗೇ ಹೇಳುತ್ತೇನೆ. ನಾನು ಹಾಡೂ ಹೇಳುತ್ತೇನೆ ಹೇಳ್ಲಾ? 'ಜಯಜನಾರ್ಧನ ಕೃಷ್ಣ.. ರಾಧಿಕಾಪತೆ' ನನಗೆ ಕೃಷ್ಣ ಅಂದ್ರೆ ತುಂಬಾ ಇಷ್ಟ. ಅಮ್ಮನ ಹತ್ತಿರ ಕೃಷ್ಣನ ಕುರಿತು ಬಹಳ ಕಥೆಗಳನ್ನು ಕೇಳುತ್ತೇನೆ. ಅವನನ್ನು ಪೂಜಿಸುತ್ತೇನೆ.

★ *ಮತ್ತಿನ್ನೇನು ಮಾಡುತ್ತೀಯಾ?*

ಪಾಶ್ಚಿಮಾತ್ಯ ನೃತ್ಯವನ್ನು ಕಲಿತಿದ್ದೇನೆ. ಇದರ ಜೊತೆಗೆ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದೇನೆ.

★ *ದಿಶಾಳನ್ನು 'ಮಣಿ' ಮಾಡಿದ್ದು ನೀನಾ ಅಥವಾ ನಿಮ್ಮ ತಾಯಿನಾ?*

ನಾನೇ. ಆದರೆ ನಮ್ಮಮ್ಮ ನನ್ನನ್ನು ಕರೆದುಕೊಂಡು ಹೋಗಿದ್ದರು. ಆಡಿಷನ್ ಅಂತ ಮಾಡಿದ್ರಲ್ಲಾ ಅದರಲ್ಲಿ ನನ್ನನ್ನು ಆಯ್ಕೆ ಮಾಡಿದ್ದರು. ನಾನು ಖುಷಿಯಿಂದ ಹೋಗುತ್ತಿದ್ದೇನೆ. ಮುಂದೇನೂ ಹೀಗೆ ಅವಕಾಶಗಳು ಸಿಕ್ಕರೆ ನಟಿಸುತ್ತೇನೆ.

★ *ನಟನೆಯಿಂದ ಶಾಲೆಗೆ ತೊಂದರೆಯಾಗುವುದಿಲ್ಲವೇ?*

ಇಲ್ಲ. ನಾನು ಶುಕ್ರವಾರ ಮತ್ತು ರಜೆ ದಿನಗಳಲ್ಲಿ ಮಾತ್ರ ಶೂಟಿಂಗ್‌ಗೆ ಬರುತ್ತೇನೆ. ಅದಕ್ಕೆ ಶಾಲೆಯ ಎಲ್ಲಾ ಶಿಕ್ಷಕರೂ ಸಹಾಯ ಮಾಡುವುದರಿಂದ ತೊಂದರೆಯಾಗುವುದಿಲ್ಲ.

★ *ಶೂಟಿಂಗ್‌ಗೆ ಹೇಗೆ ಹೋಗುವುದು?*

ನಾನು ಮೈಸೂರಿನಲ್ಲಿರುವುದರಿಂದ ಬೆಂಗಳೂರಿಗೆ ಶೂಟಿಂಗ್ ದಿನ ಹೋಗಬೇಕಾಗುತ್ತದೆ. ನನ್ನ ಅಮ್ಮ ಕರೆದುಕೊಂಡು ಹೋಗುತ್ತಾರೆ.

★ *ಪಾತ್ರದಲ್ಲಿ ಅಷ್ಟೆಲ್ಲಾ ಬೈಯಿಸಿಕೊಳ್ಳುವುದು ಬೇಸರ ಅನ್ನಿಸುವುದಿಲ್ವಾ?*

ಇಲ್ಲ. ಖುಷಿ ಆಗುತ್ತೆ. ಏಕೆಂದರೆ ಜನರ ಅಪಾರ ಪ್ರೀತಿ ಸಿಕ್ಕಿದೆಯಲ್ಲ. ಅದಕ್ಕೆ ನನಗೆ ಖುಷಿ ಅನ್ನಿಸುತ್ತದೆ!

■ ರಾಗು

ಚಿತ್ರ: ರಂಜು